**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.Lok.4/2016**

| | | |
|---|---|---|
| ಸಾಕ್ಷಿದಾರರ ಹೆಸರು | : | ದೊಡ್ಡ ಈರಪ್ಪ |
| ತಂದೆಯ/ಗಂಡನ ಹೆಸರು | : | ಸಿದ್ದಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಹೊನ್ನೂರು ಒಡ್ಡರಹಟ್ಟಿ, ಹೊನ್ನಾಳಿ ತಾಲ್ಲೂಕು |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 4

ದಿ: 17-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ (ಶ್ರೀಮತಿ ಸಿ.ಪಿ.ಎ.)**:

1. ನನ್ನ ಅಜ್ಜನ ಹೆಸರು ದೊಡ್ಡ ಈರಪ್ಪ. ನಾನು ಈಗ 10 ವರ್ಷಗಳ ಹಿಂದೆ ಹೊನ್ನಾಳಿಯ ಅಂಬೇಡ್ಕರ ನಿಗಮಕ್ಕೆ ಸಾಲಕ್ಕಾಗಿ ಒಂದು ಅರ್ಜಿಯನ್ನು ಹಾಕಿದ್ದೆ. ಸಾಲ ನನಗೆ 70 ಸಾವಿರ ರೂಪಾಯಿ ಕೊಟ್ಟರು. ನಂತರ ದಾವಣಗೆರೆಯ ಅಂಬೇಡ್ಕರ ನಿಗಮದಲ್ಲಿ ಚೆಕ್ ಕೊಡುವುದಾಗಿ ಹೇಳಿ ನನ್ನನ್ನು ಕಳುಹಿಸಿದರು. ಅದರಂತೆ ನಾನು ದಾವಣಗೆರೆಯ ಅಂಬೇಡ್ಕರ ನಿಗಮ ಕಛೇರಿಗೆ ಹೋಗಿ ಕೇಳಿದಾಗ ಅವರು ಚೆಕ್ ಕೊಡಲಿಲ್ಲ. ನಾನು ಶಾಲೆ ಕಲಿತಿಲ್ಲ ಆದ್ದರಿಂದ ಚೆಕ್ ತೆಗೆದುಕೊಂಡು ಬರಲು ನನ್ನ ತಮ್ಮ ಚಾಸಾ-1 ರವರನ್ನು ಕಳುಹಿಸಿದೆ. ಅಂಬೇಡ್ಕರ ನಿಗಮದ ಸಿಬ್ಬಂದಿಯವರು ಚೆಕ್ ಕೊಡಲು 3 ಸಾವಿರ ರೂಪಾಯಿ ಲಂಚ ಕೇಳಿದರು ಅಂತ ನನ್ನ ತಮ್ಮ ಚಾಸಾ-1 ರವರು ನನಗೆ ತಿಳಿಸಿದರು. ಆಗ ನಾನು ನನ್ನ ಕಡೆ ಹಣ ಇಲ್ಲ ಅಂತ ಹೇಳಿದೆ. ನನ್ನ ತಮ್ಮ 3 ಸಾವಿರ ರೂಪಾಯಿ ಹಣವನ್ನು ಜೋಡಿಸಿಕೊಂಡು ಲೋಕಾಯುಕ್ತ ಕಛೇರಿಗೆ ಹೋದ. ಅಂಬೇಡ್ಕರ ಸಿಬ್ಬಂದಿಗಳ ವಿರುದ್ಧ ನನ್ನ ತಮ್ಮ complaint ಕೊಟ್ಟಿದ್ದರು

ಅಂತ ಹೇಳಿದರು. ನಂತರ ಲೋಕಾಯುಕ್ತ ಪೊಲೀಸರು ಅವರನ್ನು ಟ್ರ್ಯಾಪ್ ಮಾಡಿದರು ಅಂತ ಹೇಳಿದರು.

**ಪಾಟೀ ಸವಾಲುಃ ಶ್ರೀ ಬಿ.ಬಿ.ಆರ್., ವಕೀಲರಿಂದ 2 ನೇ ಆರೋಪಿ ಪರವಾಗಿ**:

2. ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ವಿಷಯವನ್ನು ನಾನು ಬೇರೆ ಯಾರ ಕಡೆಗೂ ಹೇಳಿಲ್ಲ. ಸರ್ಕಾರಿ ವಕೀಲರು ಹೇಳಿ ಕೊಟ್ಟ ಹಾಗೆ ಸಾಕ್ಷಿ ಹೇಳಿದ್ದೇನೆ ಅಂದರೆ ಸರಿಯಲ್ಲ. ಆ ದುಡ್ಡು ಯಾರೂ ಕೇಳಿಲ್ಲ ನಾನು ಕೊಟ್ಟಿಲ್ಲ.

**ಪಾಟೀ ಸವಾಲುಃ ಶ್ರೀ ಕೆ.ಹೆಚ್.ವಿ., ವಕೀಲರಿಂದ 4 ನೇ ಆರೋಪಿ ಪರವಾಗಿ**:

3. ಈ ಕೇಸಿನಲ್ಲಿ ನನ್ನನ್ನು ಯಾರೂ ವಿಚಾರಣೆ ಮಾಡಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಇದರಲ್ಲಿ ನನಗೆ ಏನೂ ಮಾಹಿತಿ ಇಲ್ಲ.

**ಪಾಟೀ ಸವಾಲುಃ ಶ್ರೀ ಎಸ್.ವಿ.ಪಿ., ವಕೀಲರಿಂದ 3 ನೇ ಆರೋಪಿ ಪರವಾಗಿ**:

4. 3 ನೇ ಆರೋಪಿಯ ಬಗ್ಗೆ ನನಗೆ ಮಾಹಿತಿ ಇಲ್ಲ. ಅವರು ಏನೂ ಕೆಲಸ ಮಾಡುತ್ತಿದ್ದ ಮತ್ತು ಎಲ್ಲಿ ಕೆಲಸ ಮಾಡುತ್ತಿದ್ದರು ಅಂತ ನನಗೆ ಗೊತ್ತಿಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.